# 207

**I**

Total No. of Questions : 16

Total No. of Printed Pages : 4

Reg. No.

## Part – II
## KANNADA
## Paper – II
## (Second Language)

Time : 3 Hours

Max. Marks : 100

**I. A) ಈ ಕೆಳಗಿನ ಪದ್ಯಗಳಲ್ಲಿ ಒಂದರ ಭಾವಾರ್ಥ ಬರೆಯಿರಿ :** **(1×5=5)**

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ,
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ
ಜೇನ್ನೊಣದ ಹೆದೆಗೆ, ಹೂ ಬಾಣ ಹೂಡಿ, ಝುಂ ಎಂದು ಬಿಟ್ಟ ಮಾರ
ಗುಡಿಗೋಪುರಕ್ಕು, ಬಲೆ ಬೀಸಿ ಬಂದ, ಅಗೊ ಬೆಳಕು-ಬೇಟೆಗಾರ.

ಅಥವಾ

ಮನಮನ ಬೆರೆಸಿದಲ್ಲಿ ತನು ಕರಗದಿದ್ದಡೆ,
ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದಡೆ,
ಕಂಡಾಗಳಶ್ರುಜಲಂಗಳು ಸುರಿಯದಿದ್ದಡೆ,
ನುಡಿವಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ ;
ಕೂಡಲ ಸಂಗಮದೇವರ ಭಕ್ತಿಗಿದು ಚಿಹ್ನ ?
ಎನ್ನಲ್ಲಿ ಇವಿಲ್ಲಾಗಿ, ಆನು ಡಂಬಕ ಕಾಣಿರೇ !

**B) ಈ ಕೆಳಗಿನ ಇಬ್ಬರು ಕವಿ/ಲೇಖಕರಲ್ಲಿ ಒಬ್ಬರ ಪರಿಚಯ ಬರೆಯಿರಿ :** **(1×5=5)**

(1) ಕುಮಾರವ್ಯಾಸ

(2) ನೇಮಿಚಂದ್ರ.

**II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ 20 ವಾಕ್ಯ ಮೀರದಂತೆ ಉತ್ತರಿಸಿ :** **(1×5=5)**

1) ಮೂಲ ರಾಮಾಯಣಕ್ಕೂ ಜೈನ ರಾಮಾಯಣಕ್ಕೂ ಇರುವ ಮೂಲ ವ್ಯತ್ಯಾಸಗಳನ್ನು ಕುರಿತು ಬರೆಯಿರಿ.

2) ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ ?

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ 20 ವಾಕ್ಯ ಮೀರದಂತೆ ಉತ್ತರಿಸಿ : (1×5=5)

1) ತಾಯಿ-ತಂದೆ-ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ? ವಿವರಿಸಿರಿ.

2) ಮುದ್ದಣ-ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ 20 ವಾಕ್ಯ ಮೀರದಂತೆ ಉತ್ತರಿಸಿ : (1×5=5)

1) ಟೆಲಿಫೋನ್ ಲೈನ್‌ಮನ್ ತಿಪ್ಪಣ್ಣನ ಸಾವಿನ ಸಂದರ್ಭವನ್ನು ವಿವರಿಸಿ.

2) ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಲ್ಲಿ ಬೇಸರ ಮೂಡಲು ಕಾರಣಗಳೇನು ?

V. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ : (2×3=6)

1) ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ.

2) ಕುಸುಮವಾಸನೆಯಿಲ್ಲ ಕೂಡಲು ಸ್ಥಳವಿಲ್ಲ.

3) ಬರಲುಂಟೆ ಸುಗ್ಗಿ ಮತ್ತೆ ?

4) ಬಟ್ಟೆಯಲಿ ಮೈ ತುರುಕಿ ಓಡುವುದು.

VI. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ : (2×3=6)

1) ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.

2) ಎಷ್ಟು ಬೇಕಾದರೂ ಓದಿಸಲು ಸಿದ್ಧರಿದ್ದ ಅಪ್ಪಂದಿರು.

3) ಮೂರು ಬೇಸಿಗೆಯವರೆಗೆ ಚೆನ್ನಮ್ಮನ ದುಡಿತಕ್ಕೆ ಪಡಿಯಿಲ್ಲ.

4) ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

VII. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : (2×2=4)

1) ಮುದುಕ ಏನೆಂದು ಗೋಗರೆಯುತ್ತಾನೆ ?

2) ಮಗು ಕಲಿತ ವಿದ್ಯೆಗಳಾವುವು ?

3) ದುರ್ಜನರ ಕಾರ್ಯ ಯಾವ ಬಗೆಯದು ?

4) ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ ?

VIII. ಈ ಕೆಳಗಿನ ನಾಲ್ಕರಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ : (2×2=4)

1) ಸೀತಾಳ ಓದುವ ಆಸಕ್ತಿ ಹೇಗಿತ್ತು ?

2) ಮಳೆಗಾಲದಲ್ಲಿ ಹೊಳೆ ಹೇಗೆ ಕಿರಿಕಿರಿ ಎಬ್ಬಿಸುತ್ತದೆ ?

3) ಕತೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು ?

4) ಹೆಂಡ್ತಿ ಸಿದ್ಲಿಂಗಿ ಏನನ್ನು ಹೇಳುತ್ತಲೇ ಇದ್ದಳು ?

**IX.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ಸೀತೆಯನ್ನು ರಾವಣನು ಎಲ್ಲಿರಿಸಿದ್ದನು ?
2) ಯಾರ ಕೈಯಲ್ಲಿ ದರ್ಪಣವಿದ್ದು ಫಲವಿಲ್ಲ ?
3) 'ಗಂಡರೋ ನೀವ್ ಭಂಡರೊ' ಎಂದು ಕೇಳಿದವರಾರು ?
4) ಜಾಲಿಯ ಮರದಂತಿರುವವರು ಯಾರು ?
5) ಹುಸಿ ನಿದ್ದೆ ಸಾಕೆಂದು ಕವಿ ಯಾರಿಗೆ ಹೇಳುತ್ತಾರೆ ?

**X.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ಬಸಲಿಂಗನು ಡಾ|| ತಿಮ್ಮಪ್ಪನಿಗೆ ಏನೆಂದು ಸುಳ್ಳು ಹೇಳಿದನು ?
2) ದುರಾಸೆಯ ಹುಡುಗನನ್ನು ನಿರಾಕರಿಸಿದವರು ಯಾರು ?
3) ಧಣಿಗಳ ದಾಂಪತ್ಯಕ್ಕೆ ಯಾವುದು ಮೂಕ ಸಾಕ್ಷಿಯಾಗಿತ್ತು ?
4) ಕಲಾಂ ಅವರನ್ನು ಶಾಲೆಗೆ ಕಳಿಸುವಂತೆ ಪ್ರೇರೇಪಿಸಿದವರು ಯಾರು ?
5) ಕನ್ನಡವು ಕಸ್ತೂರಿಯಲ್ಲವೆ ! ಎಂದವರಾರು ?

**XI.** ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : **(5×1=5)**

1) ನಿರೂಪಕರ ಕೊಡಲಿಯ ಆಕಾರ ಹೇಗಿತ್ತು ?
2) ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ ?
3) ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ ?
4) ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು ?
5) ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು ?

**XII.** ಈ ಕೆಳಗಿನ ಛಂದಸ್ಸುಗಳಲ್ಲಿ ಒಂದರ ಲಕ್ಷಣಗಳನ್ನು ಬರೆಯಿರಿ : **(1×5=5)**

1) ಭಾಮಿನಿ ಷಟ್ಪದಿ
2) ಕಂದಪದ್ಯ
3) ಸಾಂಗತ್ಯ.

**XIII.** ಈ ಕೆಳಗಿನ ಪದ್ಯಗಳಲ್ಲಿ ಒಂದಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರು ಬರೆಯಿರಿ : **(1×5=5)**

1) ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಳೆ ಕೇಳದಾ

2) ಕುರುಳ ನೇವರಿಸಿದನು ಗಲ್ಲವ
ನೊರೆಸಿ ಮುಂಡಾಡಿದನು ಮಂಚದ
ಹೊರೆಯ ಗಿಂಡಿಯ ನೀರಿನಲಿ ತೊಳೆದನು ಮುಖಾಂಬುಜವ.

3) ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ.

XIV. ಈ ಕೆಳಗಿನ ಮೂರರಲ್ಲಿ ಒಂದರ ಅಲಂಕಾರ ಸಮನ್ವಯಿಸಿ ಬರೆಯಿರಿ : (1x5=5)

1) ಪುರದ ಪುಣ್ಯಂ ಪುರುಷ ರೂಪಿಂದೆ ಪೋಗುತಿದೆ.

2) ರಾಮನನ್ನು ಪ್ರೀತಿಯಿಂದ ಸಾಕಿದ್ದು ಹಾವಿಗೆ ಹಾಲೆರೆದಂತಾಯ್ತು.

3) ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

XV. A) ಈ ಕೆಳಗಿನ ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ : (5x1=5)

(1) ಭೋಂಕನೆ (2) ಬೀಸರ

(3) ದರ್ಪಣ (4) ವಲ್ಲಭ

(5) ಕುಜನ (6) ದಿಗಿಲು

(7) ಕುಳ (8) ಜಲಬಾಧೆ.

B) ಈ ಕೆಳಗಿನ ಪದಗಳಲ್ಲಿ ಆರಕ್ಕೆ ವಿರುದ್ಧಾರ್ಥ ಬರೆಯಿರಿ : (6x1=6)

(1) ಅಶಾಂತಿ (2) ಆಸಕ್ತಿ

(3) ಆಕಾರ (4) ಅತಿವೃಷ್ಟಿ

(5) ಅವಿವೇಕ (6) ಆರೋಹಣ

(7) ಆರೋಗ್ಯ (8) ಅವಿಶ್ವಾಸ.

C) ಈ ಕೆಳಗಿನ ಎಲ್ಲಾ ಪದಗಳಿಗೆ ಒಂದೊಂದು ಸ್ವಂತ ವಾಕ್ಯ ರಚನೆ ಮಾಡಿರಿ : (5x1=5)

(1) ಕ್ಷಮಿಸು (2) ಸಂದರ್ಭ

(3) ಅಸಾಧ್ಯ (4) ನೆರೆಮನೆ

(5) ಆಕರ್ಷಣೆ.

XVI. A) ಈ ಕೆಳಗಿನವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ : (2x2=4)

(1) ದ್ವಂದ್ವ ಸಮಾಸ (2) ಅನುಕರಣಾವ್ಯಯ

(3) ಸರ್ವನಾಮ (4) ಸವರ್ಣದೀರ್ಘ ಸಂಧಿ.

B) ಈ ಕೆಳಗಿನವುಗಳಲ್ಲಿ ಒಂದಕ್ಕೆ ಪ್ರಬಂಧ ಬರೆಯಿರಿ : (1x5=5)

(1) ಅತಿವೃಷ್ಟಿ–ಅನಾವೃಷ್ಟಿ.

(2) ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

(3) ಗ್ರಹಣ ವೈಪರೀತ್ಯಗಳು.

---